ಗವರ್ನಮೆಂಟ್ ತಯಾರೀ ಬಾಟುತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಸ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ನಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಅಪ್ಪತ್ತು ಪೌಂಗಳು ತೆಗೆದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್‌ಕತ್ತೆಯಲ್ಲಿ ಬೊಟೂನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಷ್ಟೆ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟೂನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಷ್ಟೆ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಒಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ. ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟೀವ್ ಮರ್ಚಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಔಷ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾನಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾನಲೂಕೊಡಬೇಕು.

ಸ್ವಂತ ಪ್ರಕಟನೆ.

ಮುಳಬಾಗಲು ತಾಲ್ಲೂಕು ಯಲ್ಲೂರು ಶ್ರೀ ಕೋದಂಡರಾಮಸ್ವಾಮಿ ದೈವ್ಯ ಸಹಾಯ ಕಂಪನಿ (ಲಿಮಿಟೆಡ್) ಆಫಿಸಿನಿಂದ.

ಕಂಪೆನಿ ಮಜಕೂರ ವಿಷಯ್ಯ ಷೇರ್‌ದಾರ್ರಿಗೂ ಕೃತಪಡಿಸುವದೇನಂದರೆ,—ಈ ಕಂಪೆನಿಯಲ್ಲಿ ಈಚಿಗೆ 2—3 ತಿಂಗಳಿಂದ ಅನೇಕ ಖ್ಯಾಂಚುಗಳಲ್ಲಿ ಕಾಲ್‌ಸ್ ಸರಿಯಾಗಿ ವಸೂಲಿಲ್ಲದೇಲೂ ಹೊಸ ಮೆಂಬರುಗಳು ಭರ್ತಿ ಆಗದೇಲೂ ಸಹಾಯ ಹೊಂದಿದ ಷೇರ್‌ಗಳು ಪುನಹಾ ಖಾಯಂ ಯಿಡದೇಲೂ ಮತ್ತು ಕೆಲವು ಬ್ಯಾಂಚುಗಳಿಂದ ಈ ಕಂಪೆನಿಯನ್ನು ವೈಂಡಪ್ ಮಾಡಬೇಕೆಂದು ರಿಪೋರ್ಟುಗಳು ಬಂದಿರುವದಲ್ಲದೆ ಈಗ ಅನೇಕ ಮೆಂಬರುಗಳು ವೈಂಡಪ್ ಆಗಬೇಕೆಂತ ಅಭಿಪ್ರಾಯ ಪಡುತ್ತಾರೆ. ವರ್ತಮಾನಸ್ಥಿತಿ ಆಲೋಚಿಸಲು ಕಂಪೆನಿ ವೈಂಡಪ್ ಮಾಡುವದೇ ಯುಕ್ತವಾಗಿ ತೋರುತ್ತಾಗಿ ಈ ಕಂಪೆನಿ ರೂಲ್ಸ್ ಅನುಸರಿಸಿ ಚರ್ಚೆಯಿಂದ ಪ್ರೊಸೀಡಿಂಗ್ಸ್ ಮಾಡತಕ್ಕ ಬಗ್ಗೆ ಇದೇ ಇಸವಿ ಡಿಸಂಬರ್ 20ನೇ ಬುಧವಾರ ದಿವಿ 12 ಘಂಟೆ ಲಾಗಾಯತು ಸಾಯ್ಂಕಾಲ 6 ಘಂಟೆ ವರಿಗೂ ಕಂಪನಿ ಹಾನಿನಲ್ಲಿ ಸಭೆ ಮಾಡಬೇಕಾದ್ದರಿಂದ ಮೇಲ್ಕಂಡ ಟೈಮಿಗೆ ವಿಷಯ್ಯ ಮೆಂಬರುಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾದ ದಸ್ತಾವೇಜ ಪಡದ ಮುಕಾಲೀಕರೇ ಆಗಲಿ ಹಾಜರಾಗಬೇಕೆಂದು ಕೋರಲ್ಪಟ್ಟಿದೆ. ಬೈ ಆರ್ಡರ್,—ಅಂಜನೀರಾಂ ಹಜಾರಿ, ಮ್ಯಾನೆಜಿಂಗ್ ಡೈರೆಕ್ಟರ್.

ತಾರೀಖು 2ನೇ ಡಿಸಂಬರ್ 1889.

ಚಿಂತಾಮಣೀ ತಾಲ್ಲೂಕ ಕೋಟಕಲ್ ಶ್ರೀಲಕ್ಷ್ಮೀನರಸಿಂಹಸ್ವಾಮಿ ಭಕ್ತಸಹಾಯ ಧರ್ಮನಿಧಿಸಹಿತ ಕಂಪೆನಿ ಲಿಮಿಟೆಡ್ ಆಫಿಸಿನಿಂದ.

ಕಂಪೆನಿ ಮಜಕೂರ ವಿಷಯ್ಯ ಷೇರ್ ಹೋಲ್ಡರ್‌ಗಳಿಗೂ ಕೃತಪಡಿಸುವದೇನಂದರೆ,—ಚಾಲ್ತಿ ಇಸವಿ ನವಂಬರ್ 30ನೇ ತಾರೀಖು ಶನಿವಾರ ಜನರಲ್ ಮೀಟಿಂಗಿನಲ್ಲಿ ಈ ಕಂಪೆನಿಯು ವೈಂಡಪ್ ಮಾಡಬೇಕೆಂದು ತಕ್ಕ ವಿವರ್ತುಗಳ ಸಹಿತ ನಿರ್ಣಯಿಸಿ ಇರುವ ಪ್ರೊಸೀಡಿಂಗ್ಸನ್ನು ಕಾಯಂ ಮಾಡತಕ್ಕ ಬಗ್ಗೆ ಡಿಸಂಬರ್ 28ನೇ ತಾರೀಖು ಶನಿವಾರ ಹಗಲು 12 ಘಂಟೆಗೆ ಕಂಪೆನಿ ಹಾನಿಗೆ ದಯಮಾಡಿಸಬೇಕೆಂದು ಕೋರುವ ತಮ್ಮುಗಳ ವಿಧೇಯ. ಕೆ. ಲಿಂಗಣ್ಣಶಾಸ್ತ್ರಿ, ಪ್ರಸಿಡೆಂಟ್.

ಶ್ರೀನಿವಾಸಪುರ ಜಮೀನ್ದಾರ ಕಂಪೆನಿ ಲಿಮಿಟೆಡ್ ಆಫಿಸಿಂದ.

ಕಂಪೆನಿ ಮಜಕೂರ ವಿಷಯ್ಯ ಷೇರ್‌ದಾರ್ರಿಗೂ ಕೃತಪಡಿಸುವದೇನಂದರೆ,—ಈ ಕಂಪೆನಿಯಲ್ಲಿ ಈಚಿಗೆ 2—3 ತಿಂಗಳಿಂದ ಅನೇಕ ಖ್ಯಾಂಚ್‌ಗಳಲ್ಲಿ ಕಾಲ್‌ಸ್ ಸರಿಯಾಗಿ ವಸೂಲ್ ಯಿಲ್ಲದೇಲೂ ಹೊಸ ಷೇರ್‌ಗಳು ಭರ್ತಿ ಆಗದೇಲು ಸಹಾಯ ಹೊಂದಿದ ಷೇರ್‌ಗಳು ಪುನಹ ಕಾಯಂ ಯಿಡದೇಲು ಮತ್ತು ಕೆಲವೆ ಬ್ಯಾಂಚುಗಳಿಂದ ಈ ಕಂಪೆನಿಯನ್ನ ವೈಂಡಪ್ ಮಾಡಬೇಕೆಂತಲೇ ಅಭಿಪ್ರಾಯ ಪಡುತ್ತಾರೆ ವರ್ತಮಾನಸ್ಥಿತಿ ಆಲೋಚಿಸಲು ಕಂಪೆನಿ ವೈಂಡಪ್ ಮಾಡುವದೇ ಯುಕ್ತವಾಗಿ ತೋರುತ್ತಾಗಿ ಕಂಪೆನಿ ಮಜಕೂರ್ ರೂಲ್ಸ್ 33ನೇ ಸೆಕ್ಷನ್ ಅನುಸರಿಸಿ ಚರ್ಚೆಯಿಂದ ಪ್ರೊಸೀಡಿಂಗ್ಸ್ ಮಾಡತಕ್ಕ ಬಗ್ಗೆ ಡಿಸಂಬರ್ 30ನೇ ತಾರೀಖು ಸೋಮವಾರ ದಿವಿ 3 ಘಂಟೆ ಲಾಗಾಯತು ಸಾಯಂಕಾಲ 6 ಘಂಟೆ ವರಿಗೂ ಕಂಪೆನಿ ಹಾನಿನಲ್ಲಿ ಸಭೆ ಮಾಡಬೇಕಾದ್ದರಿಂದ ಮೇಲ್ಕಂಡ ಟೈಮಿಗೆ ವಿಷಯ್ಯ ಮೆಂಬರುಗಳು ಖುದ್ದಾಗಿ ಆಗಲಿ ಅಥವಾ ಕ್ರಮಪ್ರಕಾರ ದಸ್ತಾವೇಜು ಪಡದ ಮುತ್ತಾಲೀಕರೇ ಆಗಲಿ ಹಾಜರಾಗಬೇಕೆಂದು ಕೋರಲ್ಪಟ್ಟು ಯಿದೆ.

ತಾರೀಖು 20ನೇ ನವಂಬರ 1889ನೇ ಇಸವಿ. ಬೈ ಆರ್ಡರ್, ಲೋಕನಾಥಯ್ಯ, ಏಜಂಟ್.